

# ಕಣ್ಣೆದುರು ಸಿನಿಮಾ ಕಾಮನಬಿಲ್ಲು ಮನಸಿನಲ್ಲಿ ಸಂಯಮದ ಗೆಲ್ಲು

ರಂಗಭೂಮಿಯ ಕಲಿಕೆಯನ್ನು ಸಮರ್ಥವಾಗಿ ಬಳಸಿಕೊಳ್ಳುವಂಥ ಪಾತ್ರ ತಮ್ಮದಾಗಬೇಕು ಎಂಬ ಹಂಬಲ ದಿಶಾ ರಮೇಶ್ ಅವರದ್ದು. ತಮ್ಮ ಅಭಿನಯದ 'ಎಸ್‌ಎಲ್‌ವಿ', 'ದಿ' ಸಿನಿಮಾಗಳು ಪ್ರೇಕ್ಷಕರ ಮೆಚ್ಚುಗೆ ಗಳಿಸುವ ವಿಶ್ವಾಸ ಅವರದ್ದು.

■ ಸುಮಲತಾ ಎನ್

'ದೇವರ ನಾಡಲ್ಲಿ' ಸಿನಿಮಾ ನಂತರ ಇದೀಗ 'ಎಸ್‌ಎಲ್‌ವಿ' ಚಿತ್ರದ ಮೂಲಕ ಕನ್ನಡ ಹಿರಿತೆರೆಗೆ ಮರಳಿದ್ದಾರೆ ನಟಿ ದಿಶಾ ರಮೇಶ್. ಈ ಎರಡು ಸಿನಿಮಾಗಳ ಅಂತರದಲ್ಲಿ ತಮ್ಮನ್ನು ಮತ್ತಷ್ಟು ಹೊಸ ಕಲಿಕೆಗೆ ಒಡ್ಡಿಕೊಂಡಿದ್ದಾರೆ. ಆ ಕಲಿಕೆಯನ್ನು ಸಮರ್ಥವಾಗಿ ಬಳಸಿಕೊಳ್ಳುವಂಥ ಪಾತ್ರ, ಕಥೆಗಳನ್ನು ಆದ್ಯತೆಯಾಗಿರಿಸಿಕೊಂಡಿದ್ದಾರೆ.

ಕಲಾವಿದ ಮಂಡ್ಯ ರಮೇಶ್ ಪುತ್ರಿ ದಿಶಾ ರಮೇಶ್, ಬಿ. ಸುರೇಶ್ ನಿರ್ದೇಶನದ 'ದೇವರ ನಾಡಲ್ಲಿ' ಸಿನಿಮಾ ಮೂಲಕ ಚಿತ್ರರಂಗ ಪ್ರವೇಶಿಸಿದ್ದರು. ನಂತರ ತಮ್ಮ ಓದನ್ನು ಮುಂದುವರೆಸುತ್ತಲೇ ರಂಗಭೂಮಿಯ ಚಟುವಟಿಕೆಗಳಲ್ಲೂ ನಿರತರಾಗಿದ್ದರು. ಒಳ್ಳೆ ಪಾತ್ರ, ಚಿತ್ರಕಥೆಯ ನಿರೀಕ್ಷೆಯಲ್ಲಿದ್ದ ಅವರು, 'ಎಸ್‌ಎಲ್‌ವಿ' ಮೂಲಕ ಮತ್ತೆ ಬೆಳ್ಳಿತೆರೆಗೆ ಅಡಿಯಿಟ್ಟಿದ್ದಾರೆ.

ರಂಗಭೂಮಿಯ ನೆರಳಲ್ಲೇ ಬೆಳೆದ ದಿಶಾಗೆ ಅಪ್ಪ ನಿರ್ಮಿಸಿದ್ದ 'ನಟನ ರಂಗಶಾಲೆ', ಕಲಾಬದುಕಿಗೆ ಗಟ್ಟಿ ತಳಪಾಯ ಹಾಕಿಕೊಟ್ಟಿದೆ. ಅಪ್ಪ–ಅಮ್ಮನ ಕಲಾಸಕ್ತಿ, ಅಭಿನಯ ಕಲೆಗೆ ಆಸರೆಯಾಗಿ ನಿಂತಿದೆ. ಚಿಕ್ಕವಯಸ್ಸಲ್ಲೇ ನೆಚ್ಚಿಕೊಂಡ ರಂಗಭೂಮಿಯ ಒಡನಾಟ ಮತ್ತಷ್ಟು ಹುರುಪು ತುಂಬಿದೆ.

'ರಂಗಭೂಮಿಯನ್ನು ನನ್ನ ಜೀವನದಿಂದ ಬೇರೆ ಇಟ್ಟು ನೋಡಲು ಸಾಧ್ಯವೇ ಇಲ್ಲ' ಎನ್ನುವ ದಿಶಾಗೆ ರಂಗಭೂಮಿ ಜೀವನಶೈಲಿಯಲ್ಲೇ ಒಂದಾಗಿದೆ. 'ಸಮಾಜದ ಸಮಸ್ಯೆಗಳು, ನೋವು, ಸಂತೋಷ, ಪ್ರೀತಿ, ದ್ವೇಷ, ಅಸೂಯೆ... ಹೀಗೆ ಪ್ರತಿ ಭಾವನೆಗೂ ನೇರವಾಗಿ ಸ್ಪಂದಿಸುವ ವಿಶೇಷ ಮಾಧ್ಯಮವೇ ಈ ರಂಗಭೂಮಿ' ಎಂದು ವ್ಯಾಖ್ಯಾನಿಸುತ್ತಾರೆ ದಿಶಾ.

ಚಿಕ್ಕಂದಿನಿಂದ ನಾಟಕಗಳಲ್ಲಿ ಅಭಿನಯಿಸುತ್ತಲೇ ಬೆಳೆದಿರುವ ದಿಶಾ, ರಂಗಭೂಮಿಯ ಇನ್ನಷ್ಟು ಆಳ ಅಗಲಗಳನ್ನು ಕಂಡುಕೊಳ್ಳಲು ತಮ್ಮ ಓದನ್ನೂ ರಂಗಭೂಮಿಗೆ ಪೂರಕವಾಗಿ ಆಯ್ಕೆ ಮಾಡಿಕೊಂಡರು.

"ಪಿಯುಸಿಯಲ್ಲಿ ನಾನು ಕಾಮರ್ಸ್ ವಿಷಯ ತೆಗೆದುಕೊಂಡಿದ್ದೆ. 'ದೇವರ ನಾಡಲ್ಲಿ' ಸಿನಿಮಾ ನಂತರ, ನನ್ನ ಓದನ್ನು ಪೂರ್ಣಗೊಳಿಸಬೇಕೆಂದು ಬಹಳ ಅನಿಸಿತು. ರಂಗಭೂಮಿಗೆ ಪೂರಕವಾಗಿ ನನ್ನ ಓದು ಕೂಡ ಇರಬೇಕೆನಿಸಿ ಪದವಿಯಲ್ಲಿ, ರಂಗಭೂಮಿಯೊಂದಿಗೆ ಪರೋಕ್ಷವಾಗಿ ತಳಕು ಹಾಕಿಕೊಂಡಿರುವ ಇಂಗ್ಲಿಷ್ ಸಾಹಿತ್ಯವನ್ನು, ಪತ್ರಿಕೋದ್ಯಮ ವಿಷಯವನ್ನು ಆರಿಸಿಕೊಂಡೆ. ಸ್ನಾತಕೋತ್ತರ ಪದವಿಯಲ್ಲಿ 'ಥಿಯೇಟರ್ ಆರ್ಟ್ಸ್' ವಿಷಯದಲ್ಲಿ ರಂಗಭೂಮಿಯ